ಖಾಸಗಿ ಶಿಕ್ಷಣ ಸಂಸ್ಥೆಗಳಿರಲಿಲ್ಲ. ಆದ್ದರಿಂದ ಕಾಫಿ ಪ್ಲಾಂಟರುಗಳ ಮಕ್ಕಳು, ವ್ಯಾಪಾರಿಗಳ ಮಕ್ಕಳು ಸರ್ಕಾರಿ ಶಾಲೆಯಲ್ಲಿಯೇ ಓದುತ್ತಿದ್ದರು. ಅವರೆಲ್ಲ ಕಾರಿನಲ್ಲಿ ಬಂದಿಳಿಯುತ್ತಿದ್ದರೆ, ನಾನು ಏಳು ಮೈಲಿ ನಡೆದು ಶಾಲೆ ಸೇರುತ್ತಿದ್ದೆ. ಶಿಕ್ಷಕಿಯ ಅಸಡ್ಡೆ ಮತ್ತು ಶ್ರೀಮಂತ ಸಹಪಾಠಿಗಳ ದರ್ಪ ನನ್ನ ಮೇಲೆ ತೀವ್ರವಾದ ಪರಿಣಾಮವನ್ನುಂಟು ಮಾಡಿತ್ತು.

ಅದೊಂದು ದಿನ ಕ್ಲಾಸ್ ಮಾನಿಟರ್ ಬಂದು, 'ನೀಲಮ್ಮ ಟೀಚರ್ ಇವತ್ತು ಬರೋದಿಲ್ವಂತೆ. ಎಲ್ಲರೂ ಓದಿಕೊಳ್ಳಬೇಕಂತೆ' ಎಂದು ಹೇಳಿದ. ನಾನು ಪುಸ್ತಕವನ್ನು ತೆರೆದು ಓದತೊಡಗಿದೆ. ಆದರೆ ದಿಢೀರನೆ ನನ್ನ ಮನಸ್ಸಿನಲ್ಲಿದ್ದ ಕೋಪ ಭುಗಿಲೆದ್ದಿತು. ನಾನು ಸೀದಾ ಕರಿಹಲಗೆಯ ಮೇಲೆ ಸೀಮೆಸುಣ್ಣದಿಂದ ಹೀಗೆ ಬರೆದೆ.

ನೀಲಮ್ಮ – Blue Mother

ಕೆಂಪಣ್ಣ – Red Brother (ಟೀಚರ್ ಅವರ ಅಪ್ಪ)

ಇದನ್ನೋದಿ ತರಗತಿಗೆ ತರಗತಿಯೇ ಹೊ ಎಂದು ಕಿರುಚಾಡಿತು. ನಾನು ಒಳಗೊಳಗೆ ಖುಷಿಪಟ್ಟೆ. ದುರದೃಷ್ಟ ಎಂದೇ ಹೇಳಬೇಕು, ನೀಲಮ್ಮ ಟೀಚರ್ ದಿಢೀರನೆ ಕ್ಲಾಸಿನೊಳಕ್ಕೆ ಬಂದರು. ಬಂದವರೇ ಕರಿಹಲಗೆಯನ್ನೇ ದಿಟ್ಟಿಸಿದರು. 'ಇದನ್ನು ಯಾರು ಬರೆದಿದ್ದು?' ಎಂದು ಪ್ರಶ್ನಿಸಿದಾಗ ಸಹಜವಾಗಿಯೇ ನನ್ನ ಸಹಪಾಠಿಗಳು ಒಕ್ಕೊರಲಿನಿಂದ ನನ್ನ ಹೆಸರು ಹೇಳಿದರು. ಮಾಡದ ತಪ್ಪಿಗೆ ನನ್ನನ್ನು ಪ್ರಹರಿಸುತ್ತಿದ್ದ ನೀಲಮ್ಮ ಟೀಚರ್ ಮೌನವಾಗಿ ಕ್ಲಾಸಿನಿಂದ ಹೊರಬಿದ್ದರು. ಐದ್ಹತ್ತು ನಿಮಿಷಗಳ ನಂತರ ಕ್ಲಾಸಿಗೆ ಮರಳುವಾಗ ಅವರ ಹಿಂದೆ ಹೆಡ್ ಮಾಸ್ಟರ್ ಅವರೂ ಇದ್ದರು. ಅವರ ಕೈಯಲ್ಲಿ ಮೂರು ಜಾತಿಯ ಬೆತ್ತಗಳಿದ್ದವು. ಅವರ ಹೆಸರಿನ ಆರಂಭದಲ್ಲಿ ಕೆ.ಡಿ. ಎಂಬ ಇನಿಷಿಯಲ್ ಇತ್ತು. ಅದು ಅವರಿಗೆ ಅನ್ವರ್ಥ ಇನಿಷಿಯಲ್. ಅವರ ಕಂಗಳಿಂದ ಕೆಂಡದುಂಡೆಗಳು ಹೊರಚೆಲ್ಲುತ್ತಿದ್ದವು. 'ಯಾರೋ ಇದನ್ನು ಬರೆದವರು?' ಎಂದು ಹೆಡ್‌ಮಾಸ್ಟರ್ ಪ್ರಶ್ನಿಸಿದರು. ನನ್ನ ಹೆಸರನ್ನು ವಿದ್ಯಾರ್ಥಿಗಳು ಕೂಗಿದಾಗ, ನನ್ನನ್ನು ಪಕ್ಕಕ್ಕೆ ಕರೆದರು. ಎರಡು ಬೆತ್ತಗಳನ್ನು ಮೇಜಿನ ಮೇಲಿರಿಸಿ, 'ನೀನು ಟ್ರಾನ್ಸ್‌ಲೇಟ್ ಮಾಡ್ತೀಯ' ಎನ್ನುತ್ತ ನನ್ನ ಚಡ್ಡಿಯನ್ನು ಎಳೆದರು. ಚಡ್ಡಿ ಪರ್ರನೆ ಹರಿದುಹೋಯಿತು. ಅನಂತರ ಬಿದ್ದ ಏಟುಗಳು ಅಗಣಿತವೆಂದೇ ಹೇಳಬೇಕು. ಮೂರು ಬೆತ್ತಗಳ ಏಟುಗಳನ್ನು ನೆನಪಿಸಿಕೊಂಡರೆ ಈಗಲೂ ಕೆಲವೊಮ್ಮೆ ನೋವಾಗುತ್ತದೆ. ಚಡ್ಡಿ ಹರಿದಾಗ ಒಳಗೇನೂ ಇರಲಿಲ್ಲ. ನನ್ನಮ್ಮ ಹೊಲಿಗೆ ಹಾಕಿ ಹಾಕಿ ಸುಸ್ತಾಗಿದ್ದರು. ಕೊನೆಗೆ ಹೆಡ್‌ಮಾಸ್ಟರ್ ಹೊಡೆಯುವುದನ್ನು ನಿಲ್ಲಿಸಿದರು. ಇಡೀ ತರಗತಿಯೇ ನನ್ನ ಪರಿಸ್ಥಿತಿಯನ್ನು ಕಂಡು ನಗುತ್ತಿತ್ತು. ಶಾಲೆ ಬಿಟ್ಟ ನಂತರ ಮತ್ತೆ ಏಳು ಮೈಲಿ ನಡೆಯಬೇಕು. ನನ್ನೂರಿನ ಸಹಪಾಠಿಯೊಬ್ಬ ನನ್ನ ಪುಸ್ತಕಗಳನ್ನು ಹಿಡಿದುಕೊಂಡ. ಹರಿದ ಚಡ್ಡಿಯ ಭಾಗವನ್ನು ಕೈಯಿಂದ ಮುಚ್ಚಿ ಅಳುತ್ತ ಮನೆ ಸೇರಿದೆ. ಇದು ನನ್ನ ಮೊದಲನೆಯ ಅನುವಾದ ಮತ್ತು ಮೂರು ಬೆತ್ತದ ಏಟುಗಳೇ ನನಗೆ ದೊರೆತ ಸಂಭಾವನೆ, ಪ್ರಶಸ್ತಿಗಳು. ನೀವು ಕೇಳಿದ ಪ್ರಶ್ನೆಗೆ ಇದು ಸಮರ್ಪಕ ಉತ್ತರವೇ? ಗೊತ್ತಿಲ್ಲ. ಆದರೆ ಹೀಗೂ ಅನುವಾದ ಮಾಡಬಹುದು, ಬೇರೆ ರೀತಿಯಲ್ಲಿಯೂ ಪ್ರಶಸ್ತಿಯನ್ನು ಪಡೆಯಬಹುದೇನೋ.

ಅನುವಾದವನ್ನು ನಾನು ಹವ್ಯಾಸವನ್ನಾಗಿ ಬೆಳೆಸಿಕೊಂಡೆ. ಅದು ಕೊನೆಗೆ ಪ್ರವೃತ್ತಿಯಾಯಿತು. ಸ್ವಂತವಾಗಿ ಬರೆಯುವುದಕ್ಕಿಂತಲೂ ಅನುವಾದ ಕಷ್ಟ ಎಂಬುದು ನನ್ನ ಅನುಭವದ ಮಾತು. ಏಕೆಂದರೆ ನಿಮ್ಮ ಆಶಯ ಭಾವನೆಗಳನ್ನು ನೀವು ನೇರವಾಗಿ ಬರೆಯಬಹುದು. ಆದರೆ ಬೇರೊಬ್ಬರ ಆಶಯ–ಭಾವನೆಗಳನ್ನು ನಿಮ್ಮ ಭಾಷೆಗೆ ತರುವಾಗ, ಸಾಕಷ್ಟು ಚಿಂತಿಸಬೇಕಾಗುತ್ತದೆ. ಸಾಹಿತ್ಯ ರಚನೆ ಆತ್ಮತೃಪ್ತಿ ನೀಡುತ್ತದೆ. ಅನುವಾದ ಮತ್ತಷ್ಟು ಮುಂದೆ ಸಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶ, ಮೂಲ ಲೇಖಕ ಹೇಳಬಯಸುವುದನ್ನು ಮಾತ್ರ ನೀವು ನಿಮ್ಮ ಭಾಷೆಗೆ ತರಬೇಕು. ಕಡಿಮೆಯಾಗಲೀ ಹೆಚ್ಚಾಗಲೀ ಆಗಬಾರದು. ಮೂಲ ಭಾಷೆಯ ಪರಿಚಯವಿದ್ದರೆ ಮೂಲ ಲೇಖಕ ಹೇಳುವುದನ್ನೇ ಆಕಸ್ಮಿಕವಾಗಿ ತಿರುಚಿ ಹೇಳಿದರೆ ಅನಾಹುತಗಳು ಸಂಭವಿಸುತ್ತದೆ. ಇದಕ್ಕೊಂದು ಉದಾಹರಣೆಯಾಗಿ ನನ್ನದೇ ಅನುಭವವನ್ನು ಹೇಳಬಯಸುತ್ತೇನೆ. ಪದವಿ ಮುಗಿಸಿ ಕೆಲಸವಿಲ್ಲದೆ ಕುಳಿತಿದ್ದಾಗ ಕೊಡಗಿನ ಸ್ಥಳೀಯ ಪತ್ರಿಕೆಯೊಂದು ಉಪಸಂಪಾದಕ ಹುದ್ದೆಗೆ ಅರ್ಜಿಯನ್ನು ಆಹ್ವಾನಿಸಿತ್ತು. ನಾನು ಅರ್ಜಿ ಹಾಕಿದೆ, ಆಯ್ಕೆಯಾದೆ. ಎರಡು ದಿನ ಸಂಪಾದಕರು ನನ್ನ ಕನ್ನಡ ಭಾಷೆಗೆ ಮೆಚ್ಚುಗೆ